9. ಕಟ್ಟಡಕ್ಕಾಗಿ ಕೊಟ್ಟಿರುವ ನಿವೇಶನಗಳಲ್ಲಿ ಹಳ್ಳ ತೆಗಿಯಕೂಡದು. ಕಟ್ಟಡಕ್ಕೋಸ್ಕರವಾಗಿ ಯಾವುದೇ ಮಟ್ಟವನ್ನು ಯಾತ್ತರಿಸುವದಕ್ಕಾಗಲಿ ಬೇಕಾಗುವ ಮಣ್ಣನ್ನು ಸ್ಯಾನಿಟರಿ ಇಂಜನ್ತಿಯರವರ ಅಪ್ಪಣೆ ಪ್ರಕಾರ ತೋರಿಸಲ್ಪಡುವ ಜಾಗಾದಲ್ಲಿ ತೆಗೆದುಕೊಳ್ಳತಕ್ಕದ್ದು.

10. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರು ತಪ್ಪಿ ನಡದಲ್ಲಿ ಕೊಡಲ್ಪಟ್ಟಿರುವ ನಿವೇಶನವನ್ನೆ ಹಿಂಪಡೇದಾರನು ಮುಖ್ಯವಾದ ವಿಚಾರಣೆಯೂ ಇಲ್ಲದೆ ಹೋಗಲುಡಿಸಿಕೊಳ್ಳುವದಕ್ಕೆ ಗುರಿಯಾಗುವನು.

11. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ತಪ್ಪಿ ನಡೆದದ್ದಕ್ಕೋಸ್ಕರ ನಿವೇಶನವನ್ನ ಸರ್ಕಾರಕ್ಕೆ ಜೇರಿಸಿಕೊಂಡ ಬಳಿಕ ಹಿಂದುಳೇದಾರನಾಗಲಿ ಅಥವಾ ಅವನಿಂದ ಪಡದುಕೊಂಡವರಾಗಲಿ ಯಾವ ವಿಧವಾದ ಪರಿಹರ ದ್ರವ್ಯಕ್ಕೂ ಯಾ ಸದರಿ ನಿವೇಶನದ ಮೇಲೆ ಖರ್ಚು ಮಾಡಿರುವ ಲಾಗವಡಿಗೂ ಹಕ್ಕುದಾರರಾಗುವದಿಲ್ಲ.

ಎಂ. ಜೆ. ಕೃಷ್ಣಸ್ವಾಮಿರಾವ್,
ದಿವೈಸ್ ಪ್ರೆಸಿಡೆಂಟ್.

ಮೈಸೂರು ಜೈಲ್.
ನೋಟಿಸ್.

ಸಂ 1907—08ನೆ ಇಸವಿಯಲ್ಲಿ ಮೈಸೂರು ಜೈಲಿನಲ್ಲಿ ನಿರ್ಬಂಧದಲ್ಲಿರುವ ಖೈದಿಗಳ ಉಪಯೋಗಕ್ಕೆ ಬೇಕಾಗುವ ಆಹಾರ ಜಿನಸಿಗಳ ಸರಬರಾಯಿಗಾಗಿ 1907ನೆ ಇಸವಿ ಜೂನ್ 14ನೆ ತಾರೀಖು ಪ್ರಾತಃಕಾಲ 9 ಘಂಟೆ ವರಿಗೂ ಸದರಿ ಜೈಲು ಸೂಪರ್‌ಟಿಂಡೆಂಟರವರು ವೊಹರು ಮಾಡಿದ ದರಖಾಸ್ತುಗಳನ್ನು ತೆಗದುಕೊಳ್ಳುತ್ತಾರೆ. ಇದರ ತಪಶೀಲು ಮೈಸೂರು ಗೆಜೆಟ್ II ನೆ ಭಾಗದ 202—263ನೆ ಪುಟದಲ್ಲಿ ವಿಕದವಾಗಿ ಫಾಯಿಷ್ ಮಾಡಿರುತ್ತೆ.

ಎಸ್. ವಿ. ರಾಮಸ್ವಾಮೈಯ್ಯಂಗಾರ್,
ಛಾರ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಜನ್ಸ್.

ಮೈಸೂರು ಗವರ್ಮೆಂಟ್ ಸೆಂಟ್ರಲ್ ಪ್ರೆಸ್.
ನೋಟಿಸ್.

ತಾರೀಖು 28ನೇ ಮೇ 1907.

ಬೆಂಗಳೂರಲ್ಲಿರುವ ಮೈಸೂರು ಗವರ್ಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರ್‌ಟಿಂಡೆಂಟರವರು, ಖಾಯಂ ತಲಬಿನ ಮೇಲೆ ಯಾ ಪೀಸ್ ವರ್ಕಿನ ಮೇಲೆ, ಪ್ರೂಫ್ ರೀಡರ್‌ಗಳಾಗಿಯೂ, ಕಂಪಾಜಿಟರ್‌ಗಳಾಗಿಯೂ ನೌಕರಿಗೋಸ್ಕರ, ಬೆಂಗಳೂರು ಗವರ್ಮೆಂಟ್ ಪ್ರೆಸ್ಸಿನಲ್ಲಿ ಕೆಲಸವನ್ನು ಕಲಿಯುವದಕ್ಕೆ, ಮೈಸೂರು ದೇಶೀಯ ಜನಗಳಿಂದ ಅಪ್ಲಿಕೇಷನ್ ಯಾನೆ ದರಖಾಸ್ತುಗಳನ್ನು 1907ನೇ ಜೂನ್ 30ನೇ ತಾರೀಖಿನವರಿಗೆ, ತೆಗೆದುಕೊಳ್ಳುತ್ತಾರೆ.

ದರಖಾಸ್ತುದಾರರು ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಮತ್ತು ಗೆಜೆಟೆಡ್ ಆಫಿಸರರಿಂದಾಗಲಿ ಯಾ ಮಾತುಬರರಾದ ಇತರ ದೊಡ್ಡ ಮನುಷ್ಯರಿಂದಾಗಲಿ ಪಡೆದ ಯೋಗ್ಯತಾ ಪತ್ರಿಕೆಯೊಡನೆ ದರಖಾಸ್ತುಗಳನ್ನು ಕಳುಹಿಸತಕ್ಕದ್ದು.

ದರಖಾಸ್ತುದಾರರಲ್ಲಿ ಕ್ಲುಪ್ತವಾಗಿ ಕೆಲವರು ಚುನಾಯಿಸಲ್ಪಡುವರು. ಇವರು ಪ್ರಥಮತಃ ಆರು ತಿಂಗಳುವರಿಗೆ ಪ್ರೂಫ್ ಬ್ಯಾಂಚಿನಲ್ಲಿ ಕಾಪೀ ಹೋಲ್ಡರ್‌ಗಳಾಗಿ ಯಾ ರೀಡರ್‌ಗಳಾಗಿ ನೇಮಿಸಲ್ಪಡುವರು. ತರುವಾಯ, ಎರಡೂವರೆ ವರುಷಗಳ ವರವಿಗೆ, ಯಾವ ಕೆಲಸಕ್ಕೆ ಅರ್ಹರಾಗುವರೊ ಆ ಇಲಾಖೆಗೆ ದಾಖಲ್ಮಾಡಲ್ಪಡುವರು. ಪ್ರೂಫ್ ಬ್ಯಾಂಚಿಗೆ ತಕ್ಕವರಾಗಿಯೂ ಅಲ್ಲಿ ಕೆಲಸಮಾಡಲಪೇಕ್ಷೆಯುಳ್ಳವರಾಗಿಯೂ ಇರುವ ದರಖಾಸ್ತುದಾರರು ರೀಡಿಂಗ್ ಕೆಲಸಕ್ಕೆ ತಕ್ಕವರೆಂದು ಎಣಿಸಲಿಕ್ಕೆ ಕನಿಷ್ಠಪಕ್ಷ ಬಂದು ವರುಷವಾದರೂ ಕಂಪಾಜಿಟರ್‌ರಾಗಿ ಕೆಲಸ ಮಾಡತಕ್ಕದ್ದು.

ಈ ಎರಡೂವರೆ ವರ್ಷಗಳಲ್ಲಿ ಯೋಗ್ಯರಾದ ರೀಡರ್‌ಗಳು ಇದರಿಂದ ನಮೂದಿಸುವಂತೆ ತಲಬನ್ನು ಪಡೆಯುವರು.

ಮೊದಲು ಆರು ತಿಂಗಳುಗಳಲ್ಲಿ ಮಾಹೇಯಾನಾ 3 ರೂಪಾಯಿಗಳು, ಎರಡನೇ ಆರು ತಿಂಗಳುಗಳಲ್ಲಿ 4 ರೂಪಾಯಿಗಳು ಮೂರನೇ ಆರು ತಿಂಗಳುಗಳಲ್ಲಿ 5 ರೂಪಾಯಿಗಳು ಆಖೈರಿ ಹನ್ನೆರಡು ತಿಂಗಳಲ್ಲಿ 6 ರೂಪಾಯಿಗಳು. ಕಂಪಾಜಿಟರ್‌ಗಳು ಮೇಲ್ಕಂಡ ಕಾಲದಲ್ಲಿ ಕ್ರಮವಾಗಿ 2—4—0, 3—0—0 3—12—0 ಮತ್ತು 4—10—0 ಮೇರೆಗೆ ತಲಬನ್ನು ಪಡೆಯುವರು. ಮೇಲೆ ಹೇಳಲ್ಪಟ್ಟ ಕಾಲದಲ್ಲಿ ಎಲಿಮೆಂಟರಿ ಆಫೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾವ ಮತ್ತು ತೃಪ್ತಿಕರವಾದ ನಡತೆಯುಳ್ಳವರು ಮಾತ್ರ ಕಾಲಕಾಲಕ್ಕೆ ಬಡ್ತಿಗಳನ್ನು ಹೊಂದುವರು. ಎರಡಾವೃತ್ತಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಕೆಲಸದಿಂದ ನಿವೃತ್ತಿ ಮಾಡಲ್ಪಡುವರು.

ಮೂರು ವರುಷಗಳ ನೌಕರಿಯು ಪೂರ್ತಿಯಾದಮೇಲೆ ಯಾವ ಕೆಲಸದಲ್ಲಿ ಯೋಗ್ಯತೆಯನ್ನು ಪಡೆದಿರುವರೋ, ಆಂಥಾ ಕೆಲಸವುಳ್ಳ ಬ್ಯಾಂಚಿನಲ್ಲಿ ನಿಯಮಿಸಲ್ಪಡುವರು, ಅನಂತರ ಅವರ ನೌಕರಿಯು ಗವರ್ಮೆಂಟ್ ರೆಗ್ಯುಲೇಷನಿಗನುಸಾರವಾಗಿ ಕ್ಲರ್ಕ್‌ಗೆ ತಕ್ಕದ್ದೆಂದು ಎಣಿಸಲ್ಪಡುವುದು. ಮತ್ತು ಪೀಸ್ ವರ್ಕ್ ಕಂಪಾಜಿಟರ್‌ಗಳ ವಿಷಯದಲ್ಲಿ ಅವರ ಕರ್ತ್ಯನುಗುಣವಾಗಿ ಇತರ ವಿಷಯದಲ್ಲಿ ಆಗುವ ಕಾಲಾನುಸಾರವಾದ ರೂಲ್ಸ್‌ಗಳ ಪ್ರಕಾರ ಸಂಬಳವು ಆಗುವುದು.

ಪ್ರೊಬೇಷ್ ಕಾಲವು ಪೂರೈಸಿದ ನಂತರ ಸೂಪರ್‌ಟಿಂಡೆಂಟರವರ ವಂಚಾರಾತಿಗೊಳಪಟ್ಟು, ಗವರ್ಮೆಂಟ್ ಪ್ರೆಸ್ಸಿನಲ್ಲಿ ಮೂರು ವರುಷಗಳ ಕಾಲ ನೌಕರಿ ಮಾಡುತ್ತೇವೆಂಬದಾಗಿ ಕರಾರ್‌ಬರೆದು ಸೈನ್ ಮಾಡಿ ಕೊಡತಕ್ಕದ್ದು; ಅಥವಾ ಪ್ರೊಬೇಷ್ ಕಾಲದಲ್ಲಿ ಪಡೆದ ಹಣವನ್ನು ವಾಪಸ್ ಕೊಡಬೇಕು.

ದರಖಾಸ್ತುದಾರರು ತಮಗೆ ಕೆಲಸದಲ್ಲಿ ತಕ್ಕ ವಟ್ಟಿಗೆ ಅನುಭವವುಂಟಾದಕೂಡ್ಲೆ, ಬೆಂಗಳೂರು ಸೆಂಟರ್‌ನಲ್ಲಿ ಪ್ರತಿವರುಷ ನವಂಬರ್ ತಿಂಗಳಲ್ಲಿ ನಡೆಯುವ ಮದ್ರಾಸ್ ಗವರ್ಮೆಂಟ್ ಟೈಪ್ಕ್ರಿಕಲ್ ಪರೀಕ್ಷೆಗೆ ಹೋಗುವ ಉದ್ದಿಶ್ಯ ಪ್ರಾತಃಕಾಲ ಸಾಯಂಕಾಲವಕ್ಲಾಸಿಗೆ ಫೀ ಇಲ್ಲದೇನೆ ಹಾಜರಾಗಬಹುದು. ಈ ಪರೀಕ್ಷೆಯಲ್ಲಿ ಯೋಗ್ಯತಾಪತ್ರಿಕೆಯನ್ನು ಪಡೆದವರಿಗೆ ಪ್ರೆಸ್ಸಿನಲ್ಲಿ ಖಾಲಿಯಾಗುವ ದೊಡ್ಡ ನೌಕರಿಯು ಸೂಪರ್‌ಟಿಂಡೆಂಟರವರ ಅನುಮತಿಯಿಂದ ಕೊಡಲ್ಪಡುವುದು.

ಸಿ. ಎಚ್. ಪೆಟ್ಸ್,
ಗವರ್ಮೆಂಟ್ ಪ್ರೆಸ್ ಸೂಪರ್‌ಟಿಂಡೆಂಟ್.